5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ., ಮಂಗಳೂರು,
ಕಾರ್ಯನಿರ್ವಹಣೆ, ಪುತ್ತೂರು, ದ.ಕ.

## ಸೆಷನ್ಸ್ ಕೇಸ್ ನಂಬ್ರ **5017/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಚ್ಚಿಂದ್ರ ಎ. | ಪ್ರಾ.ಸಾಃ 7 |
| ತಂದೆಯ ಹೆಸರು | : | ಬಾಬು ನಾಯ್ಕ | ಚಾ.ಸಾಃ 10 |
| ಪ್ರಾಯ | : | 43 ವರ್ಷ | ದಿನಾಂಕಃ **22.08.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಆಟೋರಿಕ್ಷಾ ಚಾಲಕ | |
| ವಾಸಸ್ಥಳ | : | ಈಶ್ವರಮಂಗಲ, ಪುತ್ತೂರು ತಾಲೂಕು. | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ಮೂರು ದಾಖಲೆಗಳನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ತಕ್ಷೀರು ಸ್ಥಳದ ಮಹಜರನ್ನು ನಿಶಾನೆ ಪಿ-4 ಎಂದು, ತಕ್ಷೀರು ಸ್ಥಳದ ಕರಡು ನಕಾಶೆಯನ್ನು ಈಗಾಗಲೇ ನಿಶಾನೆ ಪಿ-5 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ-4(ಬಿ) ಮತ್ತು ನಿಪಿ-5(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತ್ತು ಬಿಡುಗಡೆ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಶಾನೆ ಪಿ-22 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಿಗೆ ನಾನು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸುಮಾರು 9 ವರ್ಷಗಳ ಪೂರ್ವದಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗಳಲ್ಲಿ ಏನು ಬರೆದಿರುತ್ತಾರೆ ಎಂಬುದರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಅವುಗಳನ್ನು ಓದಿ ನೋಡಿರುವುದಿಲ್ಲ ಮತ್ತು ಅದೇ ರೀತಿ ಪೊಲೀಸರಿಗೆ ನನಗೆ ಅವುಗಳನ್ನು ಓದಿ ತಿಳಿಸಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಸ್ವತ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ. ನಿಪಿ-10 ರಲ್ಲಿ ಕಂಡು ಬರುವ ಮೋಟಾರುಸೈಕಲನ್ನು ನಾನು ನೋಡಿರುವುದಿಲ್ಲ. ಈ ದಿನ ನ್ಯಾಯಾಲಯದ ಮುಂದಿರುವ ಮುಮಾ-1 ನ್ನು ನಾನು ಈ

ವರೆಗೆ ನೋಡಿರುವುದಿಲ್ಲ. ನಾನು ಸ್ವಂತ ಕೆಲಸದ ಮೇಲೆ ಪೊಲೀಸ್ ಠಾಣೆಗೆ ಹೋಗಿದ್ದಾಗ ಪೊಲೀಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತವನ್ನು ಪರಿಶೀಲಿಸಿ, ಸರಕಾರಿ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

2. ದಿನಾಂಕ 16.11.2015 ರಂದು ಪಡವನ್ನೂರು ಗ್ರಾಮದ ಕೆಳಂದೂರು ಚಡಾವು ಎಂಬಲ್ಲಿ ಆರೋಪಿತರು ಪ್ರಾಸಾ.2 ರವರ ಮೇಲೆ ಕೊಲೆ ಯತ್ನ ನಡೆಸಿದ ಬಗ್ಗೆ ಸ್ಥಳ ತನಿಖೆಗಾಗಿ ಬಂದಿದ್ದು, ಪ್ರಾಸಾ.2 ರವರು ತೋರಿಸಿಕೊಟ್ಟಂತಹ ಸ್ಥಳದಲ್ಲಿ ನನ್ನ ಮತ್ತು ಚಾಸಾ.11 ರವರ ಸಮಕ್ಷಮದಲ್ಲಿ ನಿಶಾನೆ ಪಿ-4 ರಂತೆ ಸ್ಥಳ ಪಂಚನಾಮೆಯನ್ನು ಮತ್ತು ನಿಶಾನೆ ಪಿ-5 ರಂತೆ ಕರಡು ನಕಾಶೆಯನ್ನು ತಯಾರಿಸಿ, ಅವುಗಳನ್ನು ನನಗೆ ಓದಿ ಹೇಳಿ ಅವುಗಳ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ-4 ಮತ್ತು ನಿಪಿ-5 ರ ವಿವರಗಳನ್ನು ತಿಳಿದುಕೊಂಡು ಅವುಗಳನ್ನು ತಯಾರಿಸಿದ ಸ್ಥಳದಲ್ಲೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-4 ರ ಕಾಲಕ್ಕೆ ಮುಮಾ-1 ನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

3. ದಿನಾಂಕ 07.12.2015 ರಂದು ಮಾನ್ಯ ನ್ಯಾಯಾಲಯದ ಆದೇಶದಂತೆ ಕೃತ್ಯದಲ್ಲಿ ಒಳಗೊಂಡ ಕೆಎ-21/ಆರ್-1244 ನೇ ನಂಬ್ರದ ಮೋಟಾರುಸೈಕಲನ್ನು ಪ್ರಾಸಾ.2 ರವರಿಗೆ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸರು ಬಿಟ್ಟುಕೊಟ್ಟಿದ್ದು, ಆ ಸಮಯದಲ್ಲಿ ನಿಶಾನೆ ಪಿ-22 ರಂತೆ ದಾಖಲೆಯನ್ನು ತಯಾರಿಸಿದ್ದು, ಅದನ್ನು ನಾನು ಓದಿ ನೋಡಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಶಾನೆ ಪಿ-10 ರಂತೆ

ಛಾಯಾಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

4. ಪ್ರಸ್ತುತ ಪ್ರಾಸಾ.2 ರವರು ಮೃತಪಟ್ಟಿದ್ದಾರೆ. ಪ್ರಾಸಾ.2 ರವರು ಮೃತಪಟ್ಟಿದ್ದರಿಂದ ಮತ್ತು ಆರೋಪಿತರು ನನ್ನ ಪರಿಚಯಸ್ಥರಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **1** ಮತ್ತು **2**ನೇ ಆರೋಪಿತರ ಪರ ಶ್ರೀ ಎಂ.ವಿ.ಜಿ. ವಕೀಲರಿಂದಃ

(ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು, ಕಾರ್ಯನಿರ್ವಹಣೆಃ ಪುತ್ತೂರು.